<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು</u>

<u>ಸಿ.ಸಿ ನಂಃ **1091/2021**</u>

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರುಃ

1. ರಾಮೂ ಯಾನೆ ರಾಮಾಬೋವಿ
ತಂದೆ ಹನುಮಂತಾಬೋವಿ, 55 ವರ್ಷ

2. ತಿಮ್ಮಯ್ಯ ಯಾನೆ ತಿಮ್ಮಣ್ಣ
ತಂದೆ ಹನುಮಂತಾಬೋವಿ, 65 ವರ್ಷ

3. ಭೂತೇಶ್
ತಂದೆ ಭೀಮಾಬೋವಿ, 25 ವರ್ಷ

4. ರಾಜಾ ಯಾನೆ ರಾಜು
ತಂದೆ ಹನುಮಂತಾಬೋವಿ, 25 ವರ್ಷ
ಎಲ್ಲರ ವಾಸಃ ದಿಂಡಾವರ ಗ್ರಾಮ,
ಹಿರಿಯೂರು ತಾಲೂಕು .

<u>ದೋಷಾರೋಪಣೆ</u>

ನಾನು ಮೊಹಮ್ಮದ್ ಮೊಯಿನುದ್ದಿನ್ , ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ

ದಿಃ **01.06.2020** ರಂದು **7.00** ರ ಸಮಾರಿನಲ್ಲಿ ಹಿರಿಯೂರು ತಾಲ್ಲೂಕು ದಿಂಡಾವರ ಗ್ರಾಮದ ಚಾಸಾ.1 ರವರ ವಾಸದ ಮನೆಯ ಹತ್ತಿರ ಚಾಸಾ.1 ರವರು ನಿಂತಿರುವಾಗ 1 ನೇ ಆರೋಪಿಯು ಚಾಸಾ.1 ರವರ ಮನೆಯ ಹತ್ತಿರ ಬಂದು ಏಕಾಏಕಿಯಾಗಿ ಚಾಸಾ.1 ರವರಿಗೆ ಬೋಳಿ ಮಗನೇ, ಸೂಳೆ ಮಗನೆ ಎಂದು ಬೈದಾಡಿದ್ದು 2, 3 ಮತ್ತು 4 ನೇ ಆರೋಪಿತರು ಚಾಸಾ.1 ರವರಿಗೆ ಅವಾಚ್ಯಶಬ್ದಗಳಿಂದ ಬೈದಾಡಿ ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 504 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನಿಮ್ಮಗಳ ಪೈಕಿ 1 ನೇ ಆರೋಪಿಯು ಚಾಸಾ.1 ರವರನ್ನು ಕೆಳಗೆ ತಳ್ಳಿ ಕಪಾಳಕ್ಕೆ ಹೊಡೆದಿದ್ದು ಗಲಾಟೆ ಬಿಡಿಸಲು

ಬಂದ ಚಾಸಾ.2 ರವರಿಗೆ 2 ನೇ ಆರೋಪಿಯು ಕೈಯಿಂದ ಕಪಾಳಕ್ಕೆ ಹೊಡೆದು ನೆಲಕ್ಕೆ ತಳ್ಳಿದ್ದು ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 324 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನಿಮ್ಮಗಳ ಪೈಕಿ 2 ನೇ ಆರೋಪಿಯು ತನ್ನ ಕೈಯಲಿದ್ದ ಕೊಲಿನಿಂದ ಚಾಸಾ.1 ರವರ ಬಲಕಣ್ಣಿನ ಹತ್ತಿರ ಹೊಡೆದಿದ್ದು ಅದೇ ಕೋಲಿನಿಂದ 4 ನೇ ಆರೋಪಿಯು ಚಾಸಾ.1 ರವರ ತಲೆಗೆ ಹೊಡೆದಿದ್ದು ಅಲ್ಲಿಯೇ ಬಿದಿದ್ದ ಮತ್ತೊಂದು ಕೋಲನ್ನು 3 ನೇ ಆರೋಪಿಯು ತೆಗೆದುಕೊಂಡು ಚಾಸಾ.1 ರವರ ಎಡ ಭುಜಕ್ಕೆ ಹೊಡೆದಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ 323 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 323 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

(ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ 03.02.2023
ಸ್ಥಳಃ ಹಿರಿಯೂರು

(ಮೊಹಮ್ಮದ್ ಮೊಯಿನುದ್ದಿನ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು